<u>ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ</u>

ಕ್ರಿಮಿನಲ್ ಪ್ರಕರಣ ಸಂಖ್ಯೆಃ **2796/2024**

ಪಿರ್ಯಾದುದಾರರುಃ ಶ್ರೀ. ಜವರೇಗೌಡ.ಆರ್,
ಬಿನ್ ಲೇಟ್ ರಂಗಸ್ವಾಮಯ್ಯ,
ವಯಸ್ಸು ಸುಮಾರು 53 ವರ್ಷಗಳು,
ವಾಸಃ ಜ್ಯೋತಿ ಪಾಳ್ಯ ಗ್ರಾಮ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ.

- ವಿರುದ್ಧ -

ಆರೋಪಿಃ ಶ್ರೀ. ನವೀನ್ ಕುಮಾರ್,
ಬಿನ್ ಗಂಗಣ್ಣ,
ವಯಸ್ಸು 24 ವರ್ಷ,
ವಾಸ. ತಿರುಮಲೆ, ಸರ್ಕಾರಿ ಶಾಲೆ ಹತ್ತಿರ,
ಬ್ಯಾಂಕ್ ಬರೋಡ ಮುಂಭಾಗ,
ಮಾಗಡಿ ಟೌನ್, ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ.

<u>ಕಲಂ**-313** ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತನ ಹೇಳಿಕೆ</u>

<u>ಪ್ರಶ್ನೆ**.1**</u>- ಆರೋಪಿಯಾದ ನಿಮ್ಮ ವಿರುದ್ದ ಸಾಕ್ಷಿದಾರರು ನೀಡಿರುವ ಸಾಕ್ಷಿಯನ್ನು ನೀವು ಕೇಳಿದ್ದೀರಾ ?

ಆರೋಪಿಯ ಉತ್ತರಃ

<u>ಪ್ರಶ್ನೆ**.2**</u>- ಪ್ರಾಸಾ-1 ಜವರೇಗೌಡ.ಆರ್, ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪ್ರಾಸಾ-1 ರವರಿಂದ ನಿಮ್ಮ ಕುಟುಂಬದ ಪೋಷಣೆಗಾಗಿ ಮತ್ತು ಕಾನೂನು ಬದ್ದ ವ್ಯವಹಾರಗಳ ಸಲುವಾಗಿ, ಸಾಲ ತೀರುವಳಿಗಾಗಿ ಹಾಗೂ ಇತರೆ ವ್ಯವಹಾರಗಳಿಗೆ ಹಣದ ಅವಶ್ಯಕತೆ ಬೇಕಾಗಿರುವುರಿಂದ ದಿನಾಂಕ.11.06.2023 ರಂದು 15,00,000/- ರೂಗಳನ್ನು ನೀವು ಕೈ ಸಾಲವಾಗಿ ಪಡೆದುಕೊಂಡಿರುತ್ತೀರಿ ಹಾಗೂ ಸಾಲ ಪಡೆದ ಹಣವನ್ನು 6 ತಿಂಗಳ

ಒಳಗಾಗಿ ಮರುಪಾವತಿಸುವುದಾಗಿ ಹೇಳಿರುತ್ತೀರಿ, ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿಯ ಉತ್ತರಃ

ಪ್ರಶ್ನೆ.**3**- ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪಿರ್ಯಾದಿದಾರರು ದಿನಾಂಕ 17.12.2023 ರಂದು ಆರೋಪಿಯಾದ ನಿಮ್ಮನ್ನು ಹಣವನ್ನು ಹಿಂದಿರುಗಿಸುವಂತೆ ಕೇಳಿದಾಗ ಸದರಿ ಹಣವನ್ನು ಹಿಂದುರುಗಿಸುವ ಸಲುವಾಗಿ ನೀವು ಕೆನರಾ ಬ್ಯಾಂಕ್‌ನ, ಮಾಗಡಿ ಟೌನ್, ಮಾಗಡಿ ಶಾಖೆಯ, ಚೆಕ್ ಸಂಖ್ಯೆಃ109972, ದಿನಾಂಕಃ22.02.2024 ರ ಮೊತ್ತ ರೂ.15,00,000/- ಹಣವನ್ನು ನಮೂದಿಸಿ, ಚೆಕ್ ಅನ್ನು ಕೊಟ್ಟಿರುತ್ತೀರಿ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿಯ ಉತ್ತರಃ

ಪ್ರಶ್ನೆ.**4**- ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನೀಡಿರುವ ಚೆಕ್ ಸಂಖ್ಯೆಃ 109972 ಅನ್ನು ನಗದೀಕರಿಸಲು ತನ್ನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್, ಮಾಗಡಿ ಶಾಖೆಯಲ್ಲಿ ಹಾಜರು ಪಡಿಸಿದ್ದು, ಸದರಿ ಬ್ಯಾಂಕ್‌ನವರು ದಿನಾಂಕ.27.02.2024 ರಂದು "Funds insufficient" ಎಂಬ ಹಿಂಬರಹ ನೀಡಿರುತ್ತಾರೆ ಎಂದು ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ.**5**- ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮಗೆ ದಿನಾಂಕಃ12.03.2024 ರಂದು ವಕೀಲರ ಮೂಲಕ ಕಾನೂನುಬದ್ಧ ತಿಳುವಳಿಕೆ ನೋಟಿಸ್ ಗಳನ್ನು ಕಳುಹಿಸಿದ್ದು, ಆರೋಪಿಯಾದ ನಿಮಗೆ ದಿನಾಂಕ 20.03.2024 ರಂದು ತಲುಪಿರುತ್ತದೆ. ಆರೋಪಿಯಾದ ನೀವು ಸದರಿ ನೋಟಿಸ್ ಗೆ ದಿನಾಂಕ 22.03.2024 ರಂದು ಕೊಡಬೇಕಾದ ಹಣದಿಂದ ತಪ್ಪಿಸಿಕೊಳ್ಳುವ

ಪ್ರತ್ಯುತ್ತರವನ್ನು ನೀಡಿರುತ್ತೀರಿ ಹಾಗೂ ಇದುವರೆವಿಗೂ ಹಣವನ್ನು ಪಾವತಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ.**6**- ಪ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ಈ ಮಾಡಿರುತ್ತೀರಿ ಎಂದು ಸಾಕ್ಷಿ ನುಡಿದಿದ್ದು, ಈ ಬಗ್ಗೆ ನೀವು ಏನು ಹೇಳುವಿರಿ ?

ಆರೋಪಿಯ ಉತ್ತರಃ

ಪ್ರಶ್ನೆ.**7**- ನೀವು ಏನಾದರೂ ಹೇಳಲು ಬಯಸುವಿರಾ ?
ಆರೋಪಿಯ ಉತ್ತರಃ

ಪ್ರಶ್ನೆ.**8**- ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?

ಆರೋಪಿಯ ಉತ್ತರಃ

(ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ11.12.2025 ರಂದು ಸಹಿ ಮಾಡಿರುತ್ತಾರೆ)

(ಶ್ರೀ ಶ್ರೀನಿವಾಸ ಕೆ ಆರ್. )
ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

ಆರೋಪಿ ಸಹಿಃ